# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 343 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 12/12/2018 |
| 4) | ಉತ್ತರಿಸುವವರು | ಮಾನ್ಯ ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ. ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಥಾಮಸ್ ವರದಿಯ ಮುಖ್ಯಾಂಶಗಳೇನು; | ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಆ) | ಥಾಮಸ್ ವರದಿಯ ಜಾರಿಯ ಕುರಿತು ಸರ್ಕಾರ ಇಲ್ಲಿಯವರೆಗೆ ತೆಗೆದುಕೊಂಡ ತೀರ್ಮಾನಗಳೇನು; ಪ್ರಕ್ರಿಯೆ ಯಾವ ಹಂತದಲ್ಲಿದೆ; | ಥಾಮಸ್ ವರದಿಯ ಜಾರಿ ಕುರಿತಂತೆ ಸರ್ಕಾರಿ ಆದೇಶ ಸಂಖ್ಯೆ: ಕಾಇ 303 ಇಟಿಐ 2014 ದಿನಾಂಕ: 29/12/2014 ರಲ್ಲಿ ರಾಜ್ಯದಲ್ಲಿನ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ಇರುವಂತೆ ಪಿಂಚಣಿ, ಗ್ರಾಚ್ಯುಯಿಟಿ, ಸೇವಾ ಸೌಲಭ್ಯಗಳು ಹಾಗೂ ಸೇವಾ ನಿಯಮಗಳನ್ನು ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗಳಿಗೆ ಭವಿಷ್ಯವರ್ತಿಯಾಗಿ ನೀಡಲು ಮಂಜೂರಾತಿ ನೀಡಿದೆ ಹಾಗೂ ಪಿಂಚಣಿ ಹಾಗೂ ಗ್ರಾಚ್ಯುಯಿಟಿ ಸೌಲಭ್ಯಗಳನ್ನು ರಾಜ್ಯದ 196 ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ದಿನಾಂಕ: 01/04/2006 ರ ಪೂರ್ವದಲ್ಲಿ ನೇಮಕಾತಿ ಹೊಂದಿರುವ ಸಿಬ್ಬಂದಿಗಳಿಗೆ ಮಾತ್ರ ಅನ್ವಯಿಸಿ ಆದೇಶ ಹೊರಡಿಸಲಾಗಿದೆ. ಅಲ್ಲದೇ, ಸರ್ಕಾರಿ ಆದೇಶ ಸಂಖ್ಯೆ: ಕಾಇ 303 ಇಟಿಐ 2014 ದಿನಾಂಕ: 14/11/2016 ರಲ್ಲಿ ಈ ಮುಂದಿನ ಸೇವಾ ಸೌಲಭ್ಯಗಳನ್ನು ನೀಡಲು ಆದೇಶಿಸಲಾಗಿದೆ. ಪಿಂಚಣಿ, ಕುಟುಂಬ ಪಿಂಚಣಿ, ಗ್ರಾಚ್ಯುಯಿಟಿ (ನಿವೃತ್ತಿ) ಉಪದಾನ / ಡಿ.ಸಿ.ಆರ್.ಜಿ (ಮರಣ ಉಪದಾನ), ಗಳಿಕೆ ರಜೆ ನಗದೀಕರಣ (ನಿವೃತ್ತಿ ನಂತರ), ಪರಿವರ್ತಿತ ಪಿಂಚಣಿ, 10 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ, 15 ವರ್ಷಗಳ ಸ್ವಯಂಚಾಲಿತ ವೇತನ ಮುಂಬಡ್ತಿ, 20-25 ವರ್ಷಗಳ ಹೆಚ್ಚುವರಿ ವೇತನ ಬಡ್ತಿ. |
| ಇ) | ದಿ: 01-11-1997 ರಿಂದ 29-12-2014 ರವರೆಗೆ ನಿವೃತ್ತಿಯಾದವರಿಗೂ ಪೆನ್ಷನ್ ಸ್ಕೀಮ್ ಹಾಗೂ ಥಾಮಸ್ ವರದಿಯ ಸೌಲಭ್ಯವನ್ನು ಒದಗಿಸಲು ಸರ್ಕಾರದ ಕ್ರಮವೇನು? | ದಿನಾಂಕ: 29/12/2014 ರ ಆದೇಶದಲ್ಲಿ ಥಾಮಸ್ ವರದಿಯನ್ವಯ ಪಿಂಚಣಿ ಸೌಲಭ್ಯಗಳನ್ನು ಭವಿಷ್ಯವರ್ತಿಯಾಗಿ ನೀಡಲು ಆದೇಶಿಸಿರುವುದರಿಂದ ಈ ಸೌಲಭ್ಯವನ್ನು ಪೂರ್ವಾನ್ವಯವಾಗಿ ನೀಡಲು ಅವಕಾಶವಿರುವುದಿಲ್ಲ. |

**ಸಂಖ್ಯೆ: ಕೌಉಜೀಇ 68 ಕೈತಪ್ರ 2018**

(ಆರ್.ವಿ. ದೇಶಪಾಂಡೆ)
**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು**
**ಜೀವನೋಪಾಯ ಸಚಿವರು**

LAK-343

# ಅನುಬಂಧ

## ಥಾಮಸ್ ವರದಿಯ ಮುಖ್ಯಾಂಶಗಳು

| | |
|---|---|
| 2.01 | ಸಮಿತಿಯು ವೇತನಾನುದಾನ ಪಡೆಯುತ್ತಿರುವ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಪರಿಷ್ಕೃತ ಅನುದಾನ ಸಂಹಿತೆ 2007 ನ್ನು ರಚಿಸಿದ್ದು ಸದರಿ ಅನುದಾನ ಸಂಹಿತೆಯನ್ನು ಸರ್ಕಾರವು ಅಂಗೀಕರಿಸಲು ಶಿಫಾರಸ್ಸು ಮಾಡಿರುತ್ತದೆ. |
| 2.02 | ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗಳಿಗೆ ಪ್ರತಿ ತಿಂಗಳು ಇ.ಸಿ.ಎಸ್. ಮುಖಾಂತರ ವೇತನ ಪಾವತಿಸಲು ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಿರುತ್ತದೆ. |
| 2.03 | ಇತರೆ ಅನುದಾನಿತ ಪ್ರಾಥಮಿಕ ಶಿಕ್ಷಣ, ಕಾಲೇಜು ಶಿಕ್ಷಣ ಇಲಾಖೆಯಲ್ಲಿರುವಂತೆ ಪ್ರತ್ಯೇಕವಾಗಿ ಲೆಕ್ಕ ಶೀರ್ಷಿಕೆ ನೀಡಲು ಹಾಗೂ ಸಿಬ್ಬಂದಿಗಳ ವೇತನವನ್ನು ನೇರವಾಗಿ ಸಿಬ್ಬಂದಿಗಳ ವೇತನವನ್ನು ನೇರವಾಗಿ ಸಿಬ್ಬಂದಿಗಳ ಉಳಿತಾಯ ಖಾತೆಗೆ ಜಮಾ ಮಾಡುವಂತೆ ಶಿಫಾರಸ್ಸು ಮಾಡಿರುತ್ತದೆ. |
| 2.04 | ವೇತನಾನುದಾನಕ್ಕೆ ಒಳಪಡಿಸಲು ಅರ್ಹತೆಯಲ್ಲಿ ಸಡಿಲಿಕೆ ಕೋರಿ ಶಿಫಾರಸ್ಸು ಮಾಡಿರುತ್ತದೆ. |
| 2.05 | ವೇತನಾನುದಾನಕ್ಕೆ ಒಳಪಡಿಸಲು ಇರುವ ಕಾಲಮಿತಿಯನ್ನು ಸಾಮಾನ್ಯವರ್ಗದ ಆಡಳಿತ ಮಂಡಳಿಗೆ 5 ವರ್ಷ ಎಸ್.ಸಿ /ಎಸ್.ಟಿ ಆಡಳಿತ ಮಂಡಳಿಗೆ 3 ವರ್ಷ ಹಾಗೂ ಮಹಿಳೆ ಮತ್ತು ಅಂಗವಿಕಲ ಆಡಳಿತ ಮಂಡಳಿ, ಅಲ್ಪಸಂಖ್ಯಾತ ಆಡಳಿತ ಮಂಡಳಿಗೆ 4 ವರ್ಷ ಕಾಲ ಮಿತಿ ನಿಗದಿಪಡಿಸುವಂತೆ ಶಿಫಾರಸ್ಸು ಮಾಡಿರುತ್ತದೆ. |
| 2.06 | ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗಳಿಗೆ ಇತರೆ ಅನುದಾನಿತ ಪ್ರಾಥಮಿಕ ಶಿಕ್ಷಣ, ಕಾಲೇಜು ಶಿಕ್ಷಣ, ಇಲಾಖೆಯಲ್ಲಿರುವಂತೆ ಟಿ.ಬಿ.ಎಸ್ ಯೋಜನೆ ಒಳಗೊಂಡಂತೆ ಪೂರ್ಣ ಪ್ರಮಾಣದ ವೇತನ ಹಾಗೂ ಇತರೆ ಸೌಲಭ್ಯಗಳನ್ನು ನೀಡಲು ಶಿಫಾರಸ್ಸು ಮಾಡಿರುತ್ತದೆ. |
| 2.07 | ಅನುದಾನಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರವೇಶ ಪ್ರಕ್ರಿಯೆ |
| 2.08 | ಅನುದಾನಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರವೇಶ ಪ್ರಕ್ರಿಯೆಗಳನ್ನು ನಿಯಂತ್ರಿಸುವ ಮತ್ತು ಅನುಮೋದಿಸುವ ಬಗ್ಗೆ |
| 2.09 | ಪದವಿ ಪೂರ್ವ ಕಾಲೇಜಿನ ಪ್ರವೇಶಾತಿಯೊಂದಿಗೆ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರವೇಶಾತಿಯನ್ನು ತುಲನೆ ಮಾಡುವ ಬಗ್ಗೆ |
| 2.10 | ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ತರಗತಿಗಳನ್ನು ಆಗಸ್ಟ್ ಒಂದರಿಂದ ಪ್ರಾರಂಭಿಸುವ ಬಗ್ಗೆ |
| 2.11 | ಇಲಾಖೆಯ ಸೀಟ್ ಮ್ಯಾಟ್ರಿಕ್ಸ್ |

| | |
|---|---|
| 2.12 | ಸಂಸ್ಥೆಗಳಲ್ಲಿ ಪ್ರಾಚಾರ್ಯರು ಪ್ರವೇಶಾತಿಗಳನ್ನು ನಡೆಸುವ ಬಗ್ಗೆ |
| 2.13 | Supernumerary ಸ್ಥಾನಗಳು |
| 2.14 | ಅಧೀನ ಮಂಡಳಿಗಳಿಗೆ ಪ್ರವೇಶಾತಿಗಳನ್ನು Introduce ಮಾಡಿರುವ ಬಗ್ಗೆ |
| | ಸಮಾಲೋಚನೆ |
| 2.15 | |
| 2.16(i) | ಸಂಸ್ಥೆಗಳು ಯೋಜನಾ ಪತ್ರ ಮತ್ತು ಅರ್ಜಿಗಳನ್ನು ವಿತರಿಸುವ ಮತ್ತು ಸ್ವೀಕರಿಸುವ ಬಗ್ಗೆ |
| 2.16(ii) | ಪ್ರವೇಶ ಪ್ರಕ್ರಿಯೆಯಲ್ಲಿ ಸ್ಥಾನಗಳ ಮೀಸಲಾತಿ |
| 2.16(iii) | ಪ್ರವೇಶ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಜಾಹಿರಾತು ಹೊರಡಿಸುವ ಬಗ್ಗೆ |
| 2.16(iv) | ಅರ್ಜಿಗಳ ಸ್ವೀಕೃತಿಯಾಗಿರುವ ಬಗ್ಗೆ |
| 2.16(v) | ಪ್ರವೇಶಾತಿಗೆ ಸಂಬಂಧಿಸಿದಂತೆ ಮೊದಲನೆ ಸುತ್ತಿನ ಪಟ್ಟಿಯನ್ನು ಹೊರಡಿಸುವ ಬಗ್ಗೆ |
| 2.16(vi) | ಪ್ರವೇಶಾತಿಗೆ ಸಂಬಂಧಿಸಿದಂತೆ ಮೊದಲನೆ ಸುತ್ತಿನ ಪಟ್ಟಿಯ ಅನುಮೋದನೆ ಪಡೆಯುವ ಬಗ್ಗೆ |
| 2.16(vii) | ಅಧೀನ ಮಂಡಳಿಗಳ ಕೋಟಾ |
| 2.16(viii) | ಪ್ರವೇಶಾತಿಗೆ ಸಂಬಂಧಿಸಿದಂತೆ ಎರಡನೇ ಸುತ್ತಿನ ಪಟ್ಟಿಯನ್ನು ಹೊರಡಿಸುವ ಬಗ್ಗೆ |
| 2.16(ix) | ತರಬೇತಿಯನ್ನು ಆಗಸ್ಟ್ ಮೊದಲನೆ ದಿನಾಂಕದಿಂದ ಪ್ರಾರಂಭಿಸುವ ಬಗ್ಗೆ |
| 2.17 | ಪ್ರವೇಶಾತಿಗಳಿಗೆ ಸಂಬಂಧಿಸಿದಂತೆ ಇಲಾಖಾ ವಾರ್ಷಿಕ ಕೈಪಿಡಿ |
| 3.01 | ಅಖಿಲ ಭಾರತ ವೃತ್ತಿ ಪರೀಕ್ಷೆ (NCVT)ನಡೆಸಲು ಹಲವಾರು ವರ್ಷಗಳಿಂದ ಮೂಲಭೂತ ಸೌಕರ್ಯಗಳ ಕೊರತೆಯನ್ನು ಸರಿಪಡಿಸಲು ಹಾಗೂ ಪರೀಕ್ಷೆಗಳನ್ನು ನಡೆಸುವ ಸಮಯದಲ್ಲಿ ಉದ್ಭವವಾಗುವ ಹಲವಾರು ಸಮಸ್ಯೆಗಳಿಗೆ ಪರಿಹಾರ ಸಾಧ್ಯವಿದ್ದು ಅವುಗಳನ್ನು ಜಾರಿಮಾಡಲು ಶಿಫಾರಸ್ಸು ಮಾಡಿರುತ್ತಾರೆ. ಫಲಿತಾಂಶದ ನಂತರ ಎನ್.ಟಿ.ಸಿ. ಪ್ರಮಾಣಪತ್ರಗಳನ್ನು ನಿಗದಿತ ಸಮಯದಲ್ಲಿ ವಿತರಿಸಲು ಸೂಕ್ತ ಕ್ರಮ ಜರುಗಿಸಲು ತಿಳಿಸಿರುತ್ತಾರೆ. |
| 3.02 | ಅಖಿಲ ಭಾರತ ವೃತ್ತಿ ಪರೀಕ್ಷೆಗಳಿಗೆ ವೃತ್ತಿ ತತ್ವ ಹಾಗೂ ಪ್ರಾಯೋಗಿಕ ವಿಷಯಗಳ ಪ್ರಶ್ನೆ ಪತ್ರಿಕೆಗಳ ಸಮಸ್ಯೆ ಗಂಭೀರವಾಗಿ ಪರಿಗಣಿಸುವುದು. |

| | |
|---|---|
| 3.04 | ಪ್ರಾಯೋಗಿಕ ಪರೀಕ್ಷೆಗಳಿಗೆ ಪರೀಕ್ಷಕರ ಸೂಕ್ತ ನೇಮಕಾತಿ ಹಾಗೂ ಮುಂಗಡವಾಗಿ ಗುರುತುಮಾಡಿಕೊಂಡು ನಿಯೋಜಿಸುವ ಕಾರ್ಯಗಳು.<br>ವೃತ್ತಿ ತತ್ವ ಪರೀಕ್ಷೆಗಳಿಗೆ ರಾಜ್ಯದಲ್ಲಿ ಹೆಸರಾಂತ ಸಂಸ್ಥೆಗಳಾದ ಕರ್ನಾಟಕ ಲೋಕಸೇವ ಆಯೋಗ, ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಪದವಿ ಪೂರ್ವ ಪರೀಕ್ಷಾ ಮಂಡಳಿಯಂತೆ ವ್ಯವಸ್ಥೆ ಜಾರಿಮಾಡುವುದು. |
| 3.05 | ಅತಿಮುಖ್ಯವಾಗಿ ಅಖಿತ ಪರೀಕ್ಷೆಗಳ ಕಾರ್ಯ ವಿಧಾನಗಳನ್ನು ಉತ್ತಮಗೊಳಿಸುವುದು. ಪ್ರತಿ ಪರೀಕ್ಷಾ ಕೊಠಡಿಗಳಲ್ಲಿ ವಿವಿಧ ವೃತ್ತಿಗಳ ತರಬೇತಿದಾರರನ್ನು ಕೂರಿಸುವ ವ್ಯವಸ್ಥೆ ಬಗ್ಗೆ. ಪರೀಕ್ಷಾ ಕೊಠಡಿ ಮೇಲ್ವಿಚಾರಕರನ್ನು ವಿವಿಧ ಇಲಾಖೆಗಳಿಂದ ಕ್ರೋಢಿಕರಿಸುವುದು ಹಾಗೂ ವಿಚಕ್ಷಣಾ ದಳಗಳನ್ನು ಐ.ಟಿ.ಐ ವ್ಯವಸ್ಥೆಯಲ್ಲಿರುವ ಅಧಿಕಾರಿಗಳನ್ನು ಹೊರತುಪಡಿಸಿ ಬೇರೆಯವರನ್ನು ನೇಮಿಸುವುದು. |
| 3.06 | ಪರೀಕ್ಷಾ ವಿಧಾನವನ್ನು ಉತ್ತಮ ಪಡಿಸಲು ಇಲಾಖೆಯು ಅಧ್ಯಯನ ಮಾಡಿ ಯಾವುದೇ ಲೋಪ ದೋಷವಿಲ್ಲದೆ ಪರೀಕ್ಷೆಯನ್ನು ನಡೆಸುವುದು. |
| 3.10 | ರಾಷ್ಟ್ರೀಯ ವೃತ್ತಿ ಪ್ರಮಾಣ ಪತ್ರಗಳ (ಎನ್.ಟಿ.ಸಿ) ಗಳನ್ನು ಹಲವಾರು ವರ್ಷಗಳಿಂದ ವಿತರಿಸಲು ವಿಳಂಬವಾಗಿರುವುದನ್ನು ಡಿಜಿಟಿ ಜೊತೆ ಚರ್ಚೆಮಾಡಿ ಅಂಕಪಟ್ಟಿಗಳೊಂದಿಗೆ ಎನ್.ಟಿ.ಸಿ ವಿತರಿಸುವುದು. |
| 3.20 | ಪಾರದರ್ಶಕತೆ ಹಾಗೂ ಮಾಹಿತಿ ತಂತ್ರಜ್ಞಾನವನ್ನು ಇಲಾಖಾ ಕಾರ್ಯಗಳಿಗೆ ಅಳವಡಿಸುವುದು. ಇತ್ತೀಚಿನ ಕಾಯ್ದೆಗಳು ಅಂದರೆ ಮಾಹಿತಿ ಹಕ್ಕು ಕಾಯ್ದೆ ಹಾಗೂ ಇತರೆ ಸಾರ್ವಜನಿಕ ಸೇವೆಗಳನ್ನು ಉತ್ತಮಗೊಳಿಸಿ ತರಬೇತಿದಾರರು ಪೋಷಕರು, ಉದ್ದಿಮೆದಾರರು, ಖಾಸಗಿ ಆಡಳಿತ ಮಂಡಳಿಗಳು ಹಾಗು ಸಹಭಾಗಿತ್ವ ಸಂಸ್ಥೆಗಳು ಇಲಾಖೆಯ ಕಾರ್ಯಚಟುವಟಿಗಳ ಮಾಹಿತಿಯನ್ನು ನೇರವಾಗಿ ವೆಬ್ ಸೈಟ್ ಮೂಲಕ ಪಡೆಯುವ ವ್ಯವಸ್ಥೆ. |
| 3.21 | ಇಲಾಖೆ ಸ್ವತಂತ್ರವಾಗಿ ವೆಬ್‌ಸೈಟ್‌ಗಳನ್ನು ಹೊಂದುವುದು. ಈ ಮೂಲಕ ಇಲಾಖೆಯ ನೀತಿ ಕಾರ್ಯಕ್ರಮಗಳು ಹಾಗೂ ನಿಯಂತ್ರಣಗಳ ವಿವರಗಳನ್ನು ತಿಳಿಸುವುದು. |
| 3.31 | ಎಸ್.ಸಿ.ವಿ.ಟಿ.ಯೋಜನೆಯನ್ನು ಕ್ರಿಯಾಶೀಲಗೊಳಿಸುವ ಬಗ್ಗೆ ಚಾಲನೆ ನೀಡುವ ಬಗ್ಗೆ ಶಿಫಾರಸ್ಸು ಮಾಡಿರುತ್ತಾರೆ. |
| 4.01 | ವಿದ್ಯಾರ್ಥಿ ಕೇಂದ್ರೀಕೃತ ಸಹಾಯಾನುದಾನ ಪದ್ಧತಿಯನ್ನು ಅಳವಡಿಸಲು ಶಿಫಾರಸ್ಸು ಮಾಡಿರುತ್ತಾರೆ. |
| | ಸರ್ಕಾರಿ ಆದೇಶ ಸಂ: ಕಾಇ 303 ಇಟಿಐ 2014, ದಿನಾಂಕ: 29.12.2014 |
| | ಸರ್ಕಾರಿ ಆದೇಶ ಸಂ: ಕಾಇ 303 ಇಟಿಐ 2014, ದಿನಾಂಕ: 14.11.2016 |